ವಸತಿ ಯೋಜನೆಗಳು

3158 (3567); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ಕರ್ನಾಟಕ ರಾಜ್ಯ ಕೊಳಗೇರಿ ಅಭಿವೃದ್ಧಿ ಮಂಡಳಿಯು ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಮಹಾನಗರಗಳಲ್ಲಿ ಕೊಳಗೇರಿ ಪ್ರದೇಶದ ವಾಸಿಗರಿಗೆ ಒದಗಿಸಿಕೊಟ್ಟ ವಸತಿ ಯೋಜನಾ ಸೌಲಭ್ಯಗಳಾವುವು;

ಆ) ಸದರಿ ಕೊಳಗೇರಿ ಪ್ರದೇಶಗಳಲ್ಲಿನ ನಿರ್ವಸತಿಗರು ವಸತಿ ಸೌಲಭ್ಯಕ್ಕಾಗಿ ಸಲ್ಲಿಸಿರುವ ಅರ್ಜಿಗಳೆಷ್ಟು ಮತ್ತು ಆ ಪೈಕಿ ಹಂಚಿಕೆಯಾದ ಮನೆಗಳ ಸಂಖ್ಯೆ ಎಷ್ಟು;

ಇ) ಬಿಬಿಎಂಪಿ ಪ್ರದೇಶದ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಜಾರಿಗೊಳಿಸಿರುವ ವಸತಿ ಯೋಜನೆಗಳಾವುವು ಮತ್ತು ಫಲಾನುಭವಿಗಳ ಸಂಖ್ಯೆ ಎಷ್ಟು; ವಸತಿ ಯೋಜನೆಗಳನ್ನು ಸಕಾಲದಲ್ಲಿ ಒದಗಿಸುವಲ್ಲಿ ಮಂಡಳಿಯ ಗುರಿ–ಸಾಧನೆಗಳೇನು?

ಡಾ॥ ಎಂ.ಹೆಚ್. ಅಂಬರೀಷ್ (ವಸತಿ ಸಚಿವರು)

ಅ) ಕರ್ನಾಟಕ ರಾಜ್ಯ ಕೊಳಗೇರಿ ಅಭಿವೃದ್ಧಿ ಮಂಡಳಿಯು ಕಳೆದ ಮೂರು ವರ್ಷಗಳಲ್ಲಿ ರಾಜ್ಯದ 7 ಮಹಾನಗರಗಳಾದ 1) ಬೆಂಗಳೂರು 2) ಮೈಸೂರು 3) ಹುಬ್ಬಳ್ಳಿ–ಧಾರವಾಡ 4) ಗುಲ್ಬರ್ಗಾ 5) ತುಮಕೂರು 6) ದಾವಣಗೆರೆ ಮತ್ತು 7) ಬೆಳಗಾವಿ ನಗರಗಳ ಕೊಳಗೇರಿ ಪ್ರದೇಶದ ವಾಸಿಗರಿಗೆ ರಾಜೀವ್ ಆವಾಸ್ ಯೋಜನೆಯಡಿ ಒಟ್ಟು 17 ಯೋಜನೆಗಳಡಿ 18384 ಮನೆಗಳು ಮಂಜೂರಾಗಿದ್ದು, ಅವುಗಳ ಪೈಕಿ 5986 ಮನೆಗಳು ಪ್ರಗತಿಯಲ್ಲಿವೆ.

ಆ) ಈ ಯೋಜನೆಯಡಿ ವಸತಿ ಹಂಚಿಕೆಗಾಗಿ ಯಾವುದೇ ಅರ್ಜಿಗಳನ್ನು ಕರೆದಿರುವುದಿಲ್ಲ. ಕೊಳಚೆ ಪ್ರದೇಶಗಳಲ್ಲಿ ಕಚ್ಚಾ ಮನೆಗಳಲ್ಲಿ ವಾಸವಿರುವವರನ್ನು ರಾಜೀವ್ ಆವಾಸ್ ಯೋಜನೆಯ ಮಾರ್ಗಸೂಚಿಯಂತೆ, ನಗರಾಭಿವೃದ್ಧಿ ಇಲಾಖೆಯು ಮಾಡಿರುವ,

ಕೊಳಚೆ ಮುಕ್ತ ನಗರ ಕ್ರಿಯಾ ಯೋಜನೆ (Slum Free City Plan of Action) ನಲ್ಲಿ ಸೇರಿರುವ ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುತ್ತಿರುವ 18384 ಫಲಾನುಭವಿಗಳಿಗೆ (in-situ) ಮೂಲಭೂತ ಸೌಲಭ್ಯಗಳೊಂದಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲು ಉದ್ದೇಶಿಸಲಾಗಿದೆ. ಜೂನ್ 2015ರ ಅಂತ್ಯಕ್ಕೆ 5986 ಮನೆಗಳು ಪ್ರಗತಿಯಲ್ಲಿದ್ದು, ಪೂರ್ಣಗೊಂಡ ನಂತರ ಮನೆಗಳನ್ನು ಹಂಚಿಕೆ ಮಾಡಲಾಗುವುದು.

ಇ) ಬಿಬಿಎಂಪಿ ಪ್ರದೇಶದ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಕೇಂದ್ರ ಪುರಸ್ಕೃತ ರಾಜೀವ್ ಆವಾಸ್ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಸದರಿ ಯೋಜನೆಯಡಿ 12435 ಫಲಾನುಭವಿಗಳಿಗೆ ವಸತಿಯನ್ನು ಕಲ್ಪಿಸಲು ಉದ್ದೇಶಿಸಲಾಗಿದೆ. ಈ ಪೈಕಿ 6763 ಮನೆಗಳ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.

ಐಸಿಡಿಎಸ್. ಯೋಜನೆ

3159 (3568); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ರಾಜ್ಯದಲ್ಲಿ ಗರ್ಭಿಣಿಯರು, ಬಾಣಂತಿಯರು ಮತ್ತು ಆರು ವರ್ಷಗಳೊಳಗಿನ ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸುವ ಐಸಿಡಿಎಸ್ ಅನುಷ್ಠಾನಗೊಂಡಿದೆಯೆ (ಕಳೆದ ಮೂರು ವರ್ಷಗಳ ವಿವರಗಳನ್ನು ಒದಗಿಸುವುದು);

ಆ) ರಾಜ್ಯದಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವ ಯೋಜನೆಯ ವ್ಯಾಪ್ತಿಗೆ ಬರುವ ಫಲಾನುಭವಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರಗಳನ್ನು ಒದಗಿಸುವುದು);

ಇ) ಅಪೌಷ್ಟಿಕತೆಯ ಸಂಪೂರ್ಣ ನಿವಾರಣೆಗಾಗಿ ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು ಮತ್ತು ಸಾರ್ವಜನಿಕರಲ್ಲಿ ಹೆಚ್ಚಿನ ಅರಿವು ಮೂಡಿಸಲು ಮತ್ತು ಸಂಬಂಧಿತರು ಯೋಜನಾ